# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 25.06.2019 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2019ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು :**

**ಅನುಪಸ್ಥಿತ ಸದಸ್ಯರು:**

## ಪ್ರಾರಂಭಿಕ

I. ಪ್ರಾರಂಭದಲ್ಲಿ ಕುಲಸಚಿವರು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ದ ಪ್ರಕರಣ 14(4) ರ ಪ್ರಕಾರ, ಘನತೆವೆತ್ತ ಕುಲಾಧಿಪತಿಯವರಿಂದ ಆದೇಶ ಸಂಖ್ಯೆ ಜಿಎಸ್ 01 ಎಂಎಲ್ಎಂ 2018 ದಿನಾಂಕ 03.06.2019 ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳಾಗಿ ನೇಮಕಗೊಂಡು ದಿನಾಂಕ 03.06.2019 ರಂದು ಅಧಿಕಾರ ಸ್ವೀಕರಿಸಿರುವ **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ,** ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಸಭೆಗೆ ಪರಿಚಯಿಸಿ ಎಲ್ಲಾ ಸದಸ್ಯರ ಪರವಾಗಿ ಸ್ವಾಗತಿಸಿದರು. ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರುಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಪ್ರಾರಂಭಿಸಿದರು.

II. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ದ ಪ್ರಕರಣ 28(1)(ಎಫ್) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಪ್ರೊ. ಅಖಿಲೇಶ್ ಪಿ.ಎಂ., ಪ್ರಾಂಶುಪಾಲರು, ಫಾದರ್ ಮುಲ್ಲರ್ ಕಾಲೇಜು, ಮಂಗಳೂರು ಇವರನ್ನು ಸಿಂಡಿಕೇಟ್ ಸಭೆಗೆ ಸ್ವಾಗತಿಸಲಾಯಿತು.

III. ಘನತೆವೆತ್ತ ರಾಜ್ಯಪಾಲರಿಂದ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ ಸೆಕ್ಷನ್ 16(2) ರನ್ವಯ ಪತ್ರ ಸಂ. ಜಿ.ಎಸ್. 01 ಎಂಎಲ್ಎಂ 2018 ದಿನಾಂಕ 27.02.2019ರಲ್ಲಿ ದಿನಾಂಕ 28.02.2019 ರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ನೇಮಕಗೊಂಡಿದ್ದ **ಪ್ರೊ. ಕಿಶೋರಿ ನಾಯಕ್, ಕೆ** ಇವರ ಅಧಿಕಾರವಧಿ ಹೊಸ ಕುಲಪತಿಯವರ ನೇಮಕದಿಂದ ದಿನಾಂಕ 03.06.2019 ಕ್ಕೆ ಅಂತ್ಯಗೊಡಿರುವ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಯವರ ಹುದ್ದೆಯಿಂದ ಇವರು ಬಿಡುಗಡೆಗೊಂಡಿರುತ್ತಾರೆ. ಇವರು ಪ್ರಭಾರ ಕುಲಪತಿಗಳಾಗಿ ಹಾಗೂ ಸಿಂಡಿಕೇಟಿನ ಅಧ್ಯಕ್ಷರಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ್ದಕ್ಕಾಗಿ ಸಿಂಡಿಕೇಟಿನ ಕೃತಜ್ಞತಾಪೂರ್ವಕವಾಗಿ ಅಭಿನಂದಿಸಲಾಯಿತು.

IV. ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ರ ಸೆಕ್ಷನ್ 28(1)(ಎಫ್) ರಂತೆ ಸಿಂಡಿಕೇಟ್ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನ ಗೊಂಡಿದ್ದ ಶ್ರೀ ನಿತ್ಯಾನಂದ ಕೆ., ಪ್ರಾಂಶುಪಾಲರು, ಎಸ್.ಡಿ.ಎಂ. ಕಾಲೇಜ್ ಆಫ್ ಎಜುಕೇಶನ್, ಉಜಿರೆ ಇವರ ಸದಸ್ಯತ್ವದ ಅವಧಿ ದಿನಾಂಕ 23.05.2019ರಂದು ಕೊನೆಗೊಂಡಿದೆ. ಇವರು ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುತ್ತಾರೆ. ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕವಾಗಿ ಅಭಿನಂದಿಸಲಾಯಿತು.

**I ನಡಾವಳಿಗಳ ದೃಢೀಕರಣ**

ದಿನಾಂಕ 16.05.2019 ರಂದು ನಡೆದ 2019ನೇ ಸಾಲಿನ ಸಿಂಡಿಕೇಟಿನ ದ್ವಿತೀಯ ಸಾಮಾನ್ಯ ಸಭೆಯ ನಡಾವಳಿಯ ಕುರಿತು ಸದಸ್ಯರಿಂದ ಯಾವುದೇ ಅಕ್ಷೇಪಣೆಗಳು ಬಾರದೆ ಇರುವುದರಿಂದ ಸದರಿ ನಡಾವಳಿಗಳನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ**

ದಿನಾಂಕ 27.03.2019 ರಂದು ನಡೆದ 2019ನೇ ಸಾಲಿನ ಸಿಂಡಿಕೇಟಿನ ಪ್ರಥಮ ಸಾಮಾನ್ಯ ಸಭೆಯ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:-**

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.3:01 (2019)**

**ವಿಷಯ :** ಡಾ. ಬಿ.ಆರ್. ಮಂಜುನಾಥ, ಪ್ರಾಧ್ಯಾಪಕರು, ಸಾಗರ ಭೂವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ Dublin, Ireland ನಲ್ಲಿ ನಡೆಯಲಿರುವ International Union for Quaternary Research (INQUA), Congress 2019 ನಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ಸಾ.ಸ.3: 02(2019)**

**ವಿಷಯ :** ಡಾ. ಶ್ರೀಪಾದ ಕೆ.ಎಸ್., ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ ಜುಲೈ 2019 ರಿಂದ ಜೂನ್ 2020 ರವರೆಗೆ ಸಬ್ಬಾಟಿಕಲ್ ರಜೆ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.3: 03(2019)**

**ವಿಷಯ :** ಶ್ರೀ ಎಂ. ಜಿತೇಂದ್ರ ಕುಮಾರ್, ಸಿಸ್ಟಂ ಪ್ರೋಗ್ರಾಮರ್/ಅನ್ಯಾಲಿಸ್ಟ್, ಗಣಕ ವಿಜ್ಞಾನ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರು ಅಂತರ್ ವಿಶ್ವವಿದ್ಯಾನಿಲಯಗಳ ವರ್ಗಾವಣೆಯಡಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಹೊಂದಲು ನಿರಾಕ್ಷೇಪಣಾ ಪತ್ರ ಕೋರಿ ಸಲ್ಲಿಸಿದ ಮನವಿ ಬಗ್ಗೆ.

**ನಿರ್ಣಯ:** ಮಾನವೀಯತೆ ದೃಷ್ಠಿಯಿಂದ ಹಾಗೂ ವೈದ್ಯಕೀಯ ನೆಲೆಯಲ್ಲಿ ಸದರಿಯವರ ಮನವಿಯನ್ನು ಪರಿಗಣಿಸಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಹೊಂದಲು ನಿರಾಕ್ಷೇಪಣಾ ಪತ್ರ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.3: 04(2019)**

**ವಿಷಯ :** ಪಿ.ಹೆಚ್.ಡಿ. ಪದವಿ ಪ್ರದಾನ ಮಾಡಿದ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಂಡಿಕೇಟ್:ಸಾ.ಸ.3:05 (2019)**

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಸರದಿಯ ಜೇಷ್ಠತೆಯಲ್ಲಿರುವ ಪ್ರೊ. ಡಿ. ಶಿವಲಿಂಗಯ್ಯ, ಪ್ರಾಧ್ಯಾಪಕರು ಇವರನ್ನು ಸದರಿ ವಿಭಾಗ ಅಧ್ಯಕ್ಷರನ್ನಾಗಿ ಗರಿಷ್ಠ ಎರಡು ವರ್ಷ ಅಥವಾ ವಯೋನಿವೃತ್ತಿಯವರೆಗೆ ನೇಮಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಂಡಿಕೇಟ್:ಸಾ.ಸ.3:06(2019)**

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗದ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಡಾ. ಸಿ.ಕೆ. ಕಿಶೋರ್ ಕುಮಾರ್ ಇವರ ಮನವಿಯನ್ನು ಪರಿಗಣಿಸಲಾಯಿತು. ಮುಂದಿನ ಸರದಿ ಜೇಷ್ಠತೆಯಲ್ಲಿರುವ ಡಾ. ಜೆರಾಲ್ಡ್ ಡಿ'ಸೋಜಾ ಇವರ ಕೋರಿಕೆಯಂತೆ 1 ವರ್ಷ ಕಾಲಾವಧಿಗೆ ತದನಂತರದ ಸರದಿ ಜೇಷ್ಠತೆಯಲ್ಲಿರುವ ಡಾ. ಪ್ರಸನ್ನ ಅವರನ್ನು ಸದರಿ ವಿಭಾಗದ ಸಂಯೋಜಕರನ್ನಾಗಿ ನೇಮಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ**:ಸಾ.ಸ.3:07 (2019)**

**ವಿಷಯ :** ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ – ಡಾ. ರಮೇಶ್ ಸಾಬು ಗಣಿ ಇವರ ಮನವಿಗೆ ಸಂಬಂಧಿಸಿ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

**ನಿರ್ಣಯ:** ನಿರಾಕ್ಷೇಪಣಾ ಪತ್ರ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:08 (2019)**

**ವಿಷಯ :** ಮಂಜುನಾಥ ಪೈ ಮೆಮೋರಿಯಲ್ ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಾರ್ಕಳ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಶಾಶ್ವತ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಶಾಶ್ವತ ಸಂಯೋಜನಾ ಮಂಜೂರಾತಿ ಬಗ್ಗೆ ಸಿಂಡಿಕೇಟ್ ಉಪ ಸಮಿತಿಯು ಸಲ್ಲಿಸಿದ ಮರು ಪರಿಶೀಲನಾ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:09 (2019)**

**ವಿಷಯ :** ಸರಕಾರಿ ಪ್ರಥಮ ದರ್ಜೆ ಕಾಲೇಜು, ಸುಳ್ಯ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಶಾಶ್ವತ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಶಾಶ್ವತ ಸಂಯೋಜನಾ ಮಂಜೂರಾತಿ ಬಗ್ಗೆ ಸಿಂಡಿಕೇಟ್ ಉಪ ಸಮಿತಿಯು ಸಲ್ಲಿಸಿದ ಮರು ಪರಿಶೀಲನಾ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:10 (2019)**

**ವಿಷಯ :** ಸರಕಾರಿ ಪ್ರಥಮ ದರ್ಜೆ ಕಾಲೇಜು, ವಿರಾಜಪೇಟೆ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಶಾಶ್ವತ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಶಾಶ್ವತ ಸಂಯೋಜನಾ ಮಂಜೂರಾತಿ ಬಗ್ಗೆ ಸಿಂಡಿಕೇಟ್ ಉಪ ಸಮಿತಿಯು ಸಲ್ಲಿಸಿದ ಮರು ಪರಿಶೀಲನಾ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:11 (2019)**

**ವಿಷಯ :** ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಂಟ್ವಾಳ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಶಾಶ್ವತ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಶಾಶ್ವತ ಸಂಯೋಜನಾ ಮಂಜೂರಾತಿ ಬಗ್ಗೆ ಸಿಂಡಿಕೇಟ್ ಉಪ ಸಮಿತಿಯು ಸಲ್ಲಿಸಿದ ಮರು ಪರಿಶೀಲನಾ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:12 (2019)**

**ವಿಷಯ :** ಮಂಗಳೂರು ಅಕಾಡೆಮಿ ಆಫ್ ಪ್ರೊಫೆಷನಲ್ ಸ್ಟಡೀಸ್, ಮಂಗಳೂರು ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಶಾಶ್ವತ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಶಾಶ್ವತ ಸಂಯೋಜನಾ ಮಂಜೂರಾತಿ ಬಗ್ಗೆ ಡೀನರ ಸಮಿತಿಯು ಸಲ್ಲಿಸಿದ ಪುನರ್ ಪರಿಶೀಲನಾ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:13 (2019)**

**ವಿಷಯ :** ತ್ರಿಶಾ ವಿದ್ಯಾ ಸಂಧ್ಯಾ ಕಾಲೇಜು, ಉಡುಪಿ ಹಾಗೂ ತ್ರಿಶಾ ವಿದ್ಯಾ ಕಾಲೇಜು ಆಫ್ ಕಾಮರ್ಸ್ ಆಂಡ್ ಮ್ಯಾನೇಜ್‌ಮೆಂಟ್, ಉಡುಪಿ ಎಂಬ ವಿದ್ಯಾ ಸಂಸ್ಥೆಗಳಿಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಮುಂದುವರಿಕೆ/ವಿಸ್ತರಣೆ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಮುಂದುವರಿಕೆ/ವಿಸ್ತರಣೆ ಸಂಯೋಜನಾ ಮಂಜೂರಾತಿ ಬಗ್ಗೆ ಮರು ಪರಿಶೀಲನಾ ಸಮಿತಿಯು ಸಲ್ಲಿಸಿದ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:14 (2019)**

**ವಿಷಯ :** ಎ.ಜೆ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಮಂಗಳೂರು ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ವಿಸ್ತರಣಾ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಸ್ಥಳೀಯ ವಿಚಾರಣಾ ಸಮಿತಿಯು ವಿಸ್ತರಣಾ ಸಂಯೋಜನೆ ಬಗ್ಗೆ ಸಲ್ಲಿಸಿದ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:15 (2019)**

**ವಿಷಯ :** ಸೈಂಟ್ ಥಾಮಸ್ ಕಾಲೇಜು, ಬೆಳ್ತಂಗಡಿ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಮುಂದುವರಿಕೆ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಡೀನರ ಸಮಿತಿಯು ಮುಂದುವರಿಕೆ ಸಂಯೋಜನೆ ಬಗ್ಗೆ ಸಲ್ಲಿಸಿದ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:16 (2019)**

**ವಿಷಯ :** ಪನಾ ಇನ್‌ಸ್ಟಿಟ್ಯೂಟ್ ಆಫ್ ಅಂಡರ್ ಗ್ರಾಜುಯೇಟ್ ಸ್ಟಡೀಸ್, ಕೊಳಂಬೆ, ಬಜ್ಪೆ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಮುಂದುವರಿಕೆ/ ವಿಸ್ತರಣೆ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಮರು ಪರಿಶೀಲನಾ ಸಮಿತಿಯು ಮುಂದುವರಿಕೆ/ವಿಸ್ತರಣಾ ಸಂಯೋಜನೆ ಬಗ್ಗೆ ಸಲ್ಲಿಸಿದ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:17 (2019)**

**ವಿಷಯ :** ಮೆಲ್ಕಾರ್ ಡಿಗ್ರಿ ಕಾಲೇಜು, ಮಾರ್ನಬೈಲ್, ಬಂಟ್ವಾಳ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಮುಂದುವರಿಕೆ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಮರು ಪರಿಶೀಲನಾ ಸಮಿತಿಯು ಮುಂದುವರಿಕೆ ಸಂಯೋಜನೆ ಬಗ್ಗೆ ಸಲ್ಲಿಸಿದ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:18 (2019)**

**ವಿಷಯ :** ಮೇಧಾ ಕಾಲೇಜು, ಪುತ್ತೂರು ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಮುಂದುವರಿಕೆ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಮರು ಪರಿಶೀಲನಾ ಸಮಿತಿಯು ಮುಂದುವರಿಕೆ ಸಂಯೋಜನೆ ಬಗ್ಗೆ ಸಲ್ಲಿಸಿದ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:19 (2019)**

**ವಿಷಯ :** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ ಇಲ್ಲಿಗೆ ಶೈಕ್ಷಣಿಕ ವರ್ಷ 2007–08ನೇ ಸಾಲಿನಲ್ಲಿ ನೀಡಿರುವ ಸ್ವಾಯತ್ತ ಸ್ಥಾನಮಾನವನ್ನು ಮುಂದುವರಿಸುವ ಬಗ್ಗೆ.

**ನಿರ್ಣಯ:** ಸ್ವಾಯತ್ತ ಸ್ಥಾನಮಾನವನ್ನು ಮುಂದುವರಿಸುವ ಬಗ್ಗೆ ಸಮಿತಿ ನೀಡಿರುವ ವರದಿಯ ಆಧಾರದಲ್ಲಿ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:20 (2019)**

**ವಿಷಯ :** ಸ್ಕೂಲ್ ಆಫ್ ಸೋಷಿಯಲ್ ವರ್ಕ್, ರೋಶನಿ ನಿಲಯ, ಮಂಗಳೂರು ಇಲ್ಲಿಗೆ ಶೈಕ್ಷಣಿಕ ವರ್ಷ 2007–08ನೇ ಸಾಲಿನಲ್ಲಿ ನೀಡಿರುವ ಸ್ವಾಯತ್ತ ಸ್ಥಾನಮಾನವನ್ನು ಮುಂದುವರಿಸುವ ಬಗ್ಗೆ.

**ನಿರ್ಣಯ:** ಸ್ವಾಯತ್ತ ಸ್ಥಾನಮಾನವನ್ನು ಮುಂದುವರಿಸುವ ಬಗ್ಗೆ ಸಮಿತಿ ನೀಡಿರುವ ವರದಿಯ ಆಧಾರದಲ್ಲಿ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ**:ಸಾ.ಸ.3: 21(2019)**

**ವಿಷಯ :** ಡಾ. ಬಿ. ಹೆಚ್. ಶೇಖರ್, ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ ದಿನಾಂಕ 10.07.2019 ರಿಂದ 17.07.2019 ರವರೆಗೆ Industrial Institute of Science, University of Tokyo, Japan ಇಲ್ಲಿ ನಡೆಯಲಿರುವ bilateral meeting ನಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:22 (2019)**

**ವಿಷಯ :** ದೇಶದ ಯಾವುದೇ ಭಾಗದಲ್ಲಿ (ಹೊರನಾಡು/ಗಡಿನಾಡು) 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಮಕ್ಕಳಿಗೆ ಕರ್ನಾಟಕ ರಾಜ್ಯದಲ್ಲಿ ಉನ್ನತ ಶಿಕ್ಷಣಕ್ಕಾಗಿ ಪ್ರವೇಶಾತಿಯಲ್ಲಿ ಶೇಕಡಾ 5 ರಷ್ಟು ಸೀಟುಗಳನ್ನು ಕಾಯ್ದಿರಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.3:23 (2019)**

**ವಿಷಯ :** ಮಾರ್ ಐವಾನಿಯಸ್ ಕಾಲೇಜು, ಕುಂತೂರು, ಪುತ್ತೂರು ಎಂಬ ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಮುಂದುವರಿಕೆ ಸಂಯೋಜನಾ ಮಂಜೂರಾತಿ ಬಗ್ಗೆ.

**ನಿರ್ಣಯ:** ಸಿಂಡಿಕೇಟ್ ಉಪ ಸಮಿತಿಯು ಸಲ್ಲಿಸಿದ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಸಿಂಡಿಕೇಟ್ ಸಭೆಯು ಬಿ.ಎ. ಮತ್ತು ಬಿ.ಸಿ.ಎ. ಕೋರ್ಸ್‌ಗಳಿಗೆ ತಲಾ 15 ವಿದ್ಯಾರ್ಥಿ ಪರಿಮಿತಿಯೊಂದಿಗೆ ಮುಂದುವರಿಕೆ ಸಂಯೋಜನೆಯನ್ನು ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.3:24(2019)**

**ವಿಷಯ :** ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ಜೀವ ವಿಜ್ಞಾನ ವಿಭಾಗ ಕಟ್ಟಡದ ಮೊದಲ ಅಂತಸ್ತಿನಲ್ಲಿ ಎರಡು ಕೊಠಡಿಗಳ ನಿರ್ಮಾಣಕ್ಕೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ಪ್ರಾಂಶುಪಾಲರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಹಳೆ ವಿದ್ಯಾರ್ಥಿ ಸಂಘದವರು ಕೊಠಡಿಗಳನ್ನು ನಿರ್ಮಿಸಿ ಹಸ್ತಾಂತರಿಸುವುದಾಗಿ ತಿಳಿಸಿರುವ ಹಿನ್ನಲೆಯಲ್ಲಿ ಸದರಿ ಕಾಮಗಾರಿಯನ್ನು ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಕೈಗೊಂಡು ಹಸ್ತಾಂತರಿಸಲು ಅನುಮತಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:ಸಾ.ಸ.3:25 (2019)**

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ಅಧಿಕಾರಿ ಹುದ್ದೆಗೆ ನೇಮಕಾತಿ ಕುರಿತು.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ಅಧಿಕಾರಿ ಹುದ್ದೆಗೆ ಸರ್ಕಾರದ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಜಂಟಿ ನಿಯಂತ್ರಕರ ಶ್ರೇಣಿಯ ಅಧಿಕಾರಿಯೊಬ್ಬರನ್ನು ನಿಯೋಜಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಲಾಯಿತು. ಸರ್ಕಾರ ಅಧಿಕಾರಿಯನ್ನು ನಿಯೋಜಿಸುವವರೆಗೆ ವಿಶ್ವವಿದ್ಯಾನಿಲಯದ ವಾಣಿಜ್ಯ ಶಾಸ್ತ್ರ, ಅರ್ಥಶಾಸ್ತ್ರ ಅಥವಾ ವ್ಯವಹಾರ ಆಡಳಿತ ವಿಭಾಗದ ಓರ್ವ ಪ್ರಾಧ್ಯಾಪಕರನ್ನು ಹಣಕಾಸು ಅಧಿಕಾರಿಯಾಗಿ ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಂಡಿಕೇಟ್:ಸಾ.ಸ.3:26 (2019)**

**ವಿಷಯ :** ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿಯ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಮಾನ್ಯ ಕುಲಪತಿಯವರಿಗೆ ಅಧಿಕಾರವನ್ನು ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.3:27 (2019)**

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕುಲಸಚಿವ ಹುದ್ದೆಯ ಸಿಬ್ಬಂದಿಗಳಿಗೆ ಉಪಕುಲಸಚಿವ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 24.06.2019 ರಂದು ನಡೆದ ಆಯ್ಕೆ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ.ಘಟಕ:ಸಾ.ಸ.3: 28(2019)**

**ವಿಷಯ :** ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿಯಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ವಿತರಿಸಲು ಲ್ಯಾಪ್ ಟಾಪ್ ಖರೀದಿಸುವ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ :ಸಾ.ಸ.3:29 (2019)**

**ವಿಷಯ :** DST-FIST ಪ್ರೋಗ್ರಾಂ, ಜೀವ ವಿಜ್ಞಾನ ವಿಭಾಗ – ಕಂಪ್ಯೂಟರ್ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಹವಿ :ಸಾ.ಸ.3:30 (2019)**

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ 2019–20ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2018–19ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಹವಿ :ಸಾ.ಸ.3:31 (2019)**

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ಲೆಕ್ಕಪರಿಶೋಧನ ವರದಿ–ಅನುಸರಣಾ ವರದಿಯ ಅನುಮೋದನೆ ಕುರಿತು.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.3:32 (2019)**

**ವಿಷಯ :** Annual Maintenance of Campus Surveillance System and RF Connectivity of Mangalore University.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ :ಸಾ.ಸ.3:33(2019)**

**ವಿಷಯ :** ವಿಶ್ವವಿದ್ಯಾನಿಲಯದ ಓದುಗರಿಗೆ ಅಗತ್ಯವಿರುವ ಸ್ಮಾರ್ಟ್ ಕಾರ್ಡ್ ಖರೀದಿ ಕುರಿತು.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ :ಸಾ.ಸ.3:34(2019)**

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ ಹಾಗೂ ವಿಭಾಗಗಳಿಗೆ ಗಣಕಯಂತ್ರಗಳನ್ನು ಖರೀದಿಸುವ ಕುರಿತು.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಇತರೆ ವಿಷಯಗಳು:**

1. **“ಇಂಡಿಯಾ ಟುಡೇ”** ಮ್ಯಾಗಜೀನ್ “Top 32 – India’s Best Government Universities” ರ್‍ಯಾಂಕಿಂಗ್‌ನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ 8ನೇ ರ್‍ಯಾಂಕಿಂಗ್ ದೊರೆತಿರುವ ಬಗ್ಗೆ ಸಭೆಗೆ ಕುಲಸಚಿವರು ಮಾಹಿತಿ ನೀಡಿದರು. ಇಂತಹ ರ್‍ಯಾಂಕಿಂಗ್ ಹಾಗೂ ಎನ್.ಐ.ಆರ್.ಎಫ್. ರ್‍ಯಾಂಕಿಂಗ್‌ಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಉತ್ತಮ ರ್‍ಯಾಂಕಿಂಗ್ ದೊರೆತಲ್ಲಿ ಕೇಂದ್ರ ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಅನುದಾನ ಪಡೆಯಲು ಸಹಾಯಕವಾಗುವುದು ಎಂದು ತಿಳಿಸಿದರು.

ಇಂತಹ ರ್‍ಯಾಂಕಿಂಗ್‌ಗಳ ಮಟ್ಟವನ್ನು ಹೆಚ್ಚಿಸಲು ಹಾಗೂ ನ್ಯಾಕ್ ಮೌಲ್ಯಮಾಪನದಲ್ಲಿ ಅತ್ಯುತ್ತಮ ಶ್ರೇಯಾಂಕ ಪಡೆಯುವ ನಿಟ್ಟಿನಲ್ಲಿ ಕೆಲವು ನೂತನ ಯೋಜನೆಗಳನ್ನು ರೂಪಿಸಿಕೊಳ್ಳಲು ಸಭೆಯ ಅನುಮತಿಯನ್ನು ಕೋರಿದರು.

ಅ) ಕಳೆದ 38 ವರ್ಷಗಳಲ್ಲಿ ವಿಶ್ವವಿದ್ಯಾನಿಲಯವು ಬೆಳೆದು ಪ್ರಸ್ತುತ 210 ಸಂಯೋಜಿತ ಕಾಲೇಜುಗಳು, ಒಂದು ಸ್ನಾತಕೋತ್ತರ ಕೇಂದ್ರ, 5 ಘಟಕ ಕಾಲೇಜುಗಳು, 42 ಸ್ನಾತಕೋತ್ತರ ಕೋರ್ಸ್‌ಗಳು ಹಾಗೂ 40ಕ್ಕೂ ಅಧಿಕ ಮಾನ್ಯತೆ ಪಡೆದ ಸಂಶೋಧನಾ ಕೇಂದ್ರಗಳೊಂದಿಗೆ ಪ್ರತಿ ವರ್ಷ 50000ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳನ್ನು ಆಯ್ದುಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಈ ಎಲ್ಲಾ ವಿದ್ಯಾರ್ಥಿಗಳ ಮಾಹಿತಿ, ಪರೀಕ್ಷೆ ಹಾಗೂ ಫಲಿತಾಂಶಗಳ ಮಾಹಿತಿ, ವಿಶ್ವವಿದ್ಯಾನಿಲಯದಲ್ಲಿ ಕೈಗೊಂಡಿರುವ ಸಂಶೋಧನಾ ಚಟುವಟಿಕೆಗಳ ಮಾಹಿತಿ ಮತ್ತು ಆಡಳಿತಕ್ಕೆ ಸಂಬಂಧಿಸಿದ ಕಡತಗಳ ಮಾಹಿತಿಯನ್ನು ಕ್ರೋಢೀಕರಿಸಿ ಒಂದಡೆಯಲ್ಲಿ ನಿರ್ವಹಿಸಲು ವಿಶ್ವವಿದ್ಯಾನಿಲಯ ಮಾಹಿತಿ ಕೇಂದ್ರ (University Data Centre) ಸ್ಥಾಪಿಸಲು ಅನುಮತಿ ಕೋರಿದರು.

ಆ) ಇದರ ಜೊತೆಗೆ ವಿಶ್ವವಿದ್ಯಾನಿಲಯದ ಆಡಳಿತವನ್ನು ಚುರುಕುಗೊಳಿಸಲು ಹಾಗೂ ಇರುವ ಸಿಬ್ಬಂದಿಗಳೇ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತಾಗುವ ನಿಟ್ಟಿನಲ್ಲಿ e-governance ಅಳವಡಿಸಲು, ERP Solutions ಹಾಗೂ Campus Management ಅಳವಡಿಸಲು ಮತ್ತು ಇದನ್ನು ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಗೂ ನೆಟ್‌ವರ್ಕಿಂಗ್ ಮಾಡುವ ಪ್ರಸ್ತಾವನೆಗಳಿಗೆ ಹಾಗೂ ವಿಶ್ವವಿದ್ಯಾನಿಲಯ ಮಾಹಿತಿ ಕೇಂದ್ರ (University Data Centre) ಸ್ಥಾಪಿಸಲು ಸಿಂಡಿಕೇಟ್ ಸಭೆಯು ಒಪ್ಪಿಗೆ ನೀಡಿತು.

ಇ) Eco Friendly Campus ಮಾಡುವ ನಿಟ್ಟಿನಲ್ಲಿ Waste Water Management/Water Treatment Plant, Rain Water Harvesting, Solid Waste Management ಗಳನ್ನು ಅಳವಡಿಸುವ ಪ್ರಸ್ತಾವನೆಗಳಿಗೆ ಸಿಂಡಿಕೇಟ್ ಅನುಮೋದನೆ ನೀಡಿತು.

ಈ) ಮಾನ್ಯ ಕುಲಪತಿಯವರು ಮಾತನಾಡಿ ವಿಶ್ವವಿದ್ಯಾನಿಲಯದ ವಾಹನಗಳಿಗೆ ಜಿಪಿಎಸ್ ಅಳವಡಿಸಿ, ಪ್ಯುಯೆಲ್ ಆಡಿಟ್ ಮಾಡಿಸುವ ಮೂಲಕ ವಾಹನಗಳ ದುರುಪಯೋಗ ತಡೆಯಲು ಹಾಗೂ ದುಂದು ವೆಚ್ಚಗಳಿಗೆ ಕಡಿವಾಣ ಹಾಕಲು ಕ್ರಮಕೈಗೊಳ್ಳುವುದಾಗಿ ಹಾಗೂ ಎಲ್ಲಾ ಸಿಬ್ಬಂದಿಗಳು ತಮ್ಮ ವರ್ಕ್ ಡೈರಿ ನಿರ್ವಹಿಸಲು ತಿಳಿಸುವುದಾಗಿ ಸಿಂಡಿಕೇಟ್ ಗಮನಕ್ಕೆ ತಂದರು. ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕೇತರ ಸಿಬ್ಬಂದಿಗಳಿಗೆ ಬಯೋಮ್ಯಾಟ್ರಿಕ್ ಕಡ್ಡಾಯವಾಗಿ ಅನುಷ್ಠಾನಗೊಳಿಸುವುದಾಗಿ ತಿಳಿಸಿದರು. ಈ ಎಲ್ಲಾ ಕಾರ್ಯಗಳಿಗೆ ಸಿಂಡಿಕೇಟ್‌ನ ಅನುಮತಿ ಕೋರಿದ್ದು, ಸಭೆಯು ಪೂರ್ಣ ಸಹಮತವನ್ನು ವ್ಯಕ್ತಪಡಿಸಿತು.

ಉ) ಕಲೆ ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ಕೋರ್ಸ್‌ಗಳಾದ ಭರತನಾಟ್ಯ, ನೃತ್ಯ, ಸಂಗೀತ ಇತ್ಯಾದಿ ಕೋರ್ಸ್‌ಗಳಿಗೆ ಸಂಯೋಜನಾ ಶುಲ್ಕ ಕಡಿತಗೊಳಿಸಿ ಇಂತಹ ಕೋರ್ಸ್‌ಗಳಿಗೆ ಉತ್ತೇಜನ ನೀಡಬೇಕೆಂಬ ಸದಸ್ಯರೊಬ್ಬರ ಪ್ರಸ್ತಾವನೆಗೆ ಮಾನ್ಯ ಕುಲಪತಿಗಳು ಒಪ್ಪಿಗೆ ಸೂಚಿಸಿ ಈ ನಿಟ್ಟಿನಲ್ಲಿ ಒಂದು ಸಮಿತಿ ರಚಿಸಿ ಅದರ ವರದಿಯ ಆಧಾರದಲ್ಲಿ ಸೂಕ್ತ ನಿರ್ಣಯ ಕೈಗೊಳ್ಳುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| **ಕುಲಸಚಿವರು** | **ಕುಲಪತಿಗಳು** |